Ref.No.54/2020, Further cross of WW–1 on merits,

Page No.17

ದಿನಾಂಕಃ 12–03–2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ– 2 ನೇ ಪಾರ್ಟಿ ಪರವಾಗಿಃ ಶ್ರೀ.ಜೆ ಪಿ ವಕೀಲರಿಂದ

ನಾನು ಐ ಟಿ ಐ ಪಾಸಾಗಿದ್ದೇನೆ. ಐ ಟಿ ಐ ಪಾಸಾದ ಮೇಲೆ ಬೇರೆ ಕಂಪನಿಯಲ್ಲಿ ಕೆಲಸ ಮಾಡಿರುತ್ತೇನೆ ಮತ್ತು ಅನುಭವ ಇದೆ. 2 ನೇ ಪಾರ್ಟಿ ಕಂಪನಿಯಲ್ಲಿ 2010 ರಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದೇನೆ ಮತ್ತು ನೇಮಕಾತಿ ಪತ್ರವನ್ನು ಹಾಜರು ಮಾಡಿಲ್ಲ. ಮೊದಲು 2 ವರ್ಷ ಟ್ರೇನೀ ಅಂತ ಕೆಲಸ ಮಾಡಿದ್ದೇನೆ ಮತ್ತು 2013 ರಲ್ಲಿ Probationary ಅಂತ ಒಂದು ವರ್ಷ ಕೆಲಸ ಮಾಡಿದ್ದೇನೆ ಮತ್ತು 2014 ರಲ್ಲಿ Confirm ಮಾಡಿದ್ದಾರೆ . ಟ್ರೇನೀ ಆಗಿದ್ದಾಗ ಅಂದಾಜು ರೂ.2000–00 ಚಿಲ್ಲರೆ ಸ್ಟೈಫಂಡ್ ಇತ್ತು. Probationary ಆದಾಗ ಅಂದಾಜು ರೂ.7000–00 ರಿಂದ 8000–00 ತಿಂಗಳಿಗೆ ಇತ್ತು. Confirmation letter ನ್ನು ಹಾಜರು ಮಾಡಿದ್ದೇನೆ. ಸಾಕ್ಷಿಗೆ Probationary ಪತ್ರವನ್ನು ತೋರಿಸಿ ನಿಮಗೆ ನೀಡಿದಂತ ಪತ್ರ ಆಗಿರುತ್ತದೆ ಮತ್ತು ಅದರಲ್ಲಿ ನಿಮ್ಮ ಸಹಿ ಇದೆ ಎಂದರೆ ಸಾಕ್ಷಿ ಪತ್ರವನ್ನು ಮತ್ತು ಸಹಿಯನ್ನು ಒಪ್ಪಿಕೊಂಡಿರುತ್ತಾರೆ. ಸದರಿ ಪತ್ರವನ್ನು **ನಿಎಂ–1** ಎಂದೂ ಮತ್ತು ಸಾಕ್ಷಿಯ ಸಹಿಯನ್ನು **ನಿಎಂ–1(ಎ)** ಎಂದು ಗುರುತಿಸಲಾಯಿತು. ಮಿನಿಮಮ್ ವೇಜಸ್ ಆ್ಯಕ್ಟ್ ಬಗ್ಗೆ ನನಗೆ ಗೊತ್ತಿಲ್ಲ. ಮಿನಿಮಮ್ ವೇಜಸ್ ಆ್ಯಕ್ಟ್ ಕಾಯಿದೆ ಶೆಡ್ಯೂಲ್ ಪ್ರಕಾರ 2 ನೇ ಪಾರ್ಟಿ ಕಂಪನಿ ಎಂಜಿನಿಯರಿಂಗ್ ಇಂಡಸ್ಟ್ರಿ ಅಡಿಯಲ್ಲಿ ಬರುತ್ತದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. 2 ನೇ ಪಾರ್ಟಿ ಕಂಪನಿಯವರು ಸರ್ಕಾರ ನಿಗಧಿಪಡಿಸಿದ ಮಿನಿಮಮ್ ವೇಜಸ್ಗಿಂತ ಆಯಾ ವರ್ಷದಲ್ಲಿ ಹೆಚ್ಚಿನ ಸಂಬಳ ಕೊಟ್ಟಿದ್ದಾರೆ ಎಂದರೆ ಸಾಕ್ಷಿ ಮಿನಿಮಮ್ ವೇಜಸ್ ಮಾತ್ರ ಕೊಟ್ಟಿದ್ದಾರೆ ಎನ್ನುತ್ತಾರೆ. 2013 ರಲ್ಲಿ ನಿಮ್ಮ ಕಂಪನಿಗೆ ಅನ್ವಯವಾಗುವಂತೆ ಮಿನಿಮಮ್ ವೇಜಸ್ ಎಷ್ಟು ಇತ್ತು ಎಂದರೆ ಸಾಕ್ಷಿ ನೆನಪಿಲ್ಲ ಎನ್ನುತ್ತಾರೆ. 2013 ರಲ್ಲಿ ಪಿ ಎಫ್ ಮತ್ತು ಇ ಎಸ್ ಐ ಕಡಿತಗೊಳಿಸಿದ ಮೇಲೆ ನಿಮ್ಮ ಸಂಬಳ ತಿಂಗಳಿಗೆ 10000–

00 ಕ್ಕಿಂತ ಜಾಸ್ತಿ ಇತ್ತು ಎಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ. 2018 ರಲ್ಲಿ ನನ್ನನ್ನು ಸಸ್ಪೆಂಡ್ ಮಾಡಿದ್ದಾರೆ ಮತ್ತು 2021 ರಲ್ಲಿ ನನ್ನನ್ನು ಡಿಸ್ಮಿಸ್ ಮಾಡಿದ್ದಾರೆ. 2018 ರಲ್ಲಿ ನನ್ನನ್ನು ಸಸ್ಪೆಂಡ್ ಮಾಡುವ ಸಮಯದಲ್ಲಿ ನನ್ನ ಸಂಬಳ ತಿಂಗಳಿಗೆ ರೂ.15000-00 ಇತ್ತು. 2018 ರಲ್ಲಿ ಕನಿಷ್ಟ ವೇತನ ಎಷ್ಟು ಇತ್ತು ಎಂದು ನನಗೆ ಗೊತ್ತಿಲ್ಲ ನೋಡಿ ಹೇಳಬೇಕು ಎನ್ನುತ್ತಾರೆ. ಸಾಕ್ಷಿಗೆ ಮಿನಿಮಮ್ ವೇಜಸ್ ನೋಟಿಫಿಕೇಶನ್ನು ತೋರಿಸಿ ದಿನಾಂಕಃ1-4-2017 ರಿಂದ 31-3-2018 ರವರೆಗೆ ಮಿನಿಮಮ್ ವೇಜಸ್ ರೂ.7772-00 ಜೋನ್-2 ಇತ್ತು ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಅದೇರೀತಿ ದಿನಾಂಕಃ1-4-2018 ರಿಂದ 31-3-2019 ರವರೆಗೆ ಮಿನಿಮಮ್ ವೇಜಸ್ ರೂ.11693-00 ಇತ್ತು ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಅದೇರೀತಿ ದಿಃ1-4-2019 ರಿಂದ 30-3-2020 ರವರೆಗೆ ಮಿನಿಮಮ್ ವೇಜಸ್ ರೂ.11888-00 ತಿಂಗಳಿಗೆ ಇತ್ತು ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. 2 ನೇ ಪಾರ್ಟಿ ಕಂಪನಿಯಲ್ಲಿ ಕೆಲಸ ಮಾಡುವಾಗ ನನ್ನ ಎಂಪ್ಲಾಯೀ ಕೋಡು 118 ಇತ್ತು ಎಂದರೆ ಸರಿ . ಸಾಕ್ಷಿಗೆ ಜೂನ್ 2019 ರ ಪೇ ಸ್ಲಿಪ್ ನ್ನು ತೋರಿಸಿ ಸದರಿ ಪೇ ಸ್ಲಿಪ್ ನಿಮಗೆ ಸಂಬಂಧಪಟ್ಟಿದ್ದು ಮತ್ತು ಜೂನ್ 2019 ರಲ್ಲಿ ನಿಮ್ಮ ಗ್ರಾಸ್ ಸ್ಯಾಲರಿ ರೂ.18841-00 ಇತ್ತು ಎಂದರೆ ಸಾಕ್ಷಿ ಸದರಿ ಪೇ ಸ್ಲಿಪನ್ನು ಒಪ್ಪಿಕೊಂಡಿರುತ್ತಾರೆ. ಸದರಿ ಪೇ ಸ್ಲಿಪ್ಪನ್ನು ನಿಎಂ-2 ಎಂದು ಗುರುತಿಸಲಾಯಿತು.

ಕಾಲಾವಕಾಶ ನೀಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಪಿ.ಶ್ರೀನಿವಾಸ),
ಅಧ್ಯಕ್ಷಾಧಿಕಾರಿಗಳು,
ಔದ್ಯಮಿಕ ನ್ಯಾಯಾಧೀಕರಣ,
ಮೈಸೂರು.